ಭೂಮಿಯಿಂದ ಆಚೆಗೆ 6ನೇ ತರಗತಿ ವಿಜ್ಞಾನ ಭಾಗ-2 ಅಧ್ಯಾಯ 12 ರ ಪ್ರಶ್ನೋತ್ತರಗಳು ನೋಟ್ಸ್

# ಭೂಮಿಯಿಂದ ಆಚೆಗೆ

ಆರನೇ ತರಗತಿ ವಿಜ್ಞಾನ ಭಾಗ-2 ಅಧ್ಯಾಯ 12 ರ ಪ್ರಶ್ನೋತ್ತರಗಳು ನೋಟ್ಸ್

**೧. ಹೊಂದಿಸಿ ಬರೆಯಿರಿ.**

ಕಂಬಸಾಲು I ............................ಕಂಬಸಾಲು II

(i) ಭೂಮಿಯ ಉಪಗ್ರಹ............ ಚಂದ್ರ

(ii) ಕೆಂಪು ಗ್ರಹ......................,.. ಮಂಗಳ

(iii) ನಕ್ಷತ್ರಪುಂಜ .,.................... ಓರಿಯನ್

(iv) ಸಂಜೆಯ ನಕ್ಷತ್ರವೆಂದು ಸಾಮಾನ್ಯವಾಗಿ ಕರೆಯಲಾಗುವ ಗ್ರಹ ....................ಶುಕ್ರ

**೨. (i) ಕೆಳಗಿನ ಒಗಟನ್ನು ಬಿಡಿಸಿ.**

ನನ್ನ ಮೊದಲ ಅಕ್ಷರ MAN ನಲ್ಲಿದೆ. ಆದರೆ CAN ನಲ್ಲಿ ಇಲ್ಲ.

ನನ್ನ ಎರಡನೆ ಅಕ್ಷರ ACE ನಲ್ಲಿದೆ ಮತ್ತು FAN ನಲ್ಲೂ ಇದೆ.

ನನ್ನ ಮೂರನೇ ಅಕ್ಷರ RAT ನಲ್ಲಿದೆ ಮತ್ತು CAT ನಲ್ಲಿ ಇಲ್ಲ.

ನನ್ನ ನಾಲ್ಕನೇ ಅಕ್ಷರ SUN ನಲ್ಲಿದೆ ಮತ್ತು FUN ನಲ್ಲಿ ಇಲ್ಲ.
ನಾನು ಸೂರ್ಯನ ಸುತ್ತ ಸುತ್ತುವ ಗ್ರಹ.

ಉತ್ತರ
MARS (ಮಂಗಳ)

ii) ಇದೇ ರೀತಿಯ ಎರಡು ಒಗಟುಗಳನ್ನು ನೀವು ರಚಿಸಿ.

1.ನನ್ನ ಮೇಲೆ ಜೀವಿಗಳು ಜೀವಿಸಲು ಅವಕಾಶ ಇದೆ ಬೇರೆ ಯಾವ ಗ್ರಹದಲ್ಲೂ ಇಲ್ಲ ನಾನು ಯಾರು?

ಉತ್ತರ

ಭೂಮಿ

2. ನನ್ನ ಮೊದಲ ಎರಡು ಅಕ್ಷರ heat ನಲ್ಲಿ ಇವೆ. Hit ನಲ್ಲಿ ಇಲ್ಲ.
ನನ್ನ ಮೂರನೇ ಅಕ್ಷರ car ನಲ್ಲಿ ಇದೆ. Cab ನಲ್ಲಿ ಇಲ್ಲ.
ನನ್ನ ಕೊನೆಯ ಎರಡು ಅಕ್ಷರ truth ನಲ್ಲಿ ಇವೆ. Myth ನಲ್ಲೂ ಇವೆ.

ನಾನು ಒಂದು ಗ್ರಹ.
ನಾನು ಯಾರು?

ಉತ್ತರ
(EARTH) ಭೂಮಿ

೩. ಈ ಕೆಳಗಿನವುಗಳಲ್ಲಿ ಯಾವುದು ನಮ್ಮ ಸೌರವ್ಯೂಹದ ಸದಸ್ಯ ಅಲ್ಲ ?
(i) ಸಿರಿಯಸ್ (ii) ಧೂಮಕೇತುಗಳು
(iii) ಕ್ಷುದ್ರಗ್ರಹಗಳು (iv) ಪ್ಲುಟೋ

ಉತ್ತರ
(i) ಸಿರಿಯಸ್

ಇದು ಒಂದು ನಕ್ಷತ್ರವಾಗಿದೆ.

೪. ಈ ಕೆಳಗಿನವುಗಳಲ್ಲಿ ಯಾವುದು ಸೂರ್ಯನ ಗ್ರಹವಲ್ಲ?
i) ಗುರು (ii) ಪ್ಲುಟೋ
(ii) ನೆಪ್ಚ್ಯೂನ್ (iv) ಶನಿ

ಉತ್ತರ
(ii) ಪ್ಲುಟೋ

೫. ಧ್ರುವನಕ್ಷತ್ರ ಮತ್ತು ಸಿರಿಯಸ್ ಇವುಗಳಲ್ಲಿ ಯಾವುದು ಪ್ರಕಾಶಮಾನವಾದ ನಕ್ಷತ್ರ?

ಉತ್ತರ
ಸಿರಿಯಸ್ ಅತ್ಯಂತ ಪ್ರಕಾಶಮಾನವಾದ ನಕ್ಷತ್ರವಾಗಿದೆ.

೬. ಕಲಾಕಾರನೊಬ್ಬನು ರಚಿಸಿದ ಸೌರವ್ಯೂಹದ ಚಿತ್ರವನ್ನು ಚಿತ್ರ ೧೨.೧೨ ರಲ್ಲಿ ನೀಡಲಾಗಿದೆ. ಗ್ರಹಗಳ ಅನುಕ್ರಮ ಜೋಡಣೆ ಸರಿಯಾಗಿದೆಯೇ? ಸರಿಯಾಗಿಲ್ಲದಿದ್ದಲ್ಲಿ, ಕೊಟ್ಟಿರುವ ಬಾಕ್ಸ್‌ನಲ್ಲಿ ಚಿತ್ರದಲ್ಲಿನ ಸರಿಯಾದ ಕ್ರಮವನ್ನು ಬರೆಯಿರಿ.

ಗ್ರಹಗಳ ಅನುಕ್ರಮ ಜೋಡಣೆ ಸರಿಯಾಗಿಲ್ಲ. ಸರಿಯಾದ ಕ್ರಮ ಈ ಕೆಳಗಿನ ಚಿತ್ರದಲ್ಲಿದೆ.

೭. ನಕ್ಷತ್ರಗಳಿರುವ ರಾತ್ರಿಯಾಕಾಶದ ಒಂದು ಭಾಗವನ್ನು ಚಿತ್ರ ೧೨.೧೩ ರಲ್ಲಿ ತೋರಿಸಲಾಗಿದೆ. ಎಚ್ಚರಿಕೆಯಿಂದ ನೋಡಿ ಮತ್ತು ವಿನ್ಯಾಸಗಳನ್ನು ರೂಪಿಸುವ ನಕ್ಷತ್ರಗಳ ಗುಂಪುಗಳನ್ನು ಗುರುತಿಸಿ. - ಬಿಗ್ ಡಿಪ್ಪರ್ ಮತ್ತು ಲಿಟಲ್ ಡಿಪ್ಪರ್ ಈ ವಿನ್ಯಾಸಗಳಲ್ಲಿನ ನಕ್ಷತ್ರಗಳನ್ನು ಸೇರಿಸಲು ಗೆರೆಗಳನ್ನು ಎಳೆಯಿರಿ. ಮತ್ತು ಅವುಗಳನ್ನು ಹೆಸರಿಸಿ. ಧ್ರುವ ನಕ್ಷತ್ರವನ್ನು ಗುರುತಿಸಿ ಮತ್ತು ಹೆಸರು ಬರೆಯಿರಿ. ಸಹಾಯಕ್ಕಾಗಿ ನೀವು ಚಿತ್ರ ೧೨.೪ ನ್ನು ಪರಾಮರ್ಶಿಸಬಹುದು.

೮. ರಾತ್ರಿಯಾಕಾಶದ ಒಂದು ಭಾಗವನ್ನು ೧೨.೧೪ ರಲ್ಲಿ ತೋರಿಸಲಾಗಿದೆ. ಓರಿಯನ್‌ಗಾಗಿ ರೇಖೆಗಳನ್ನು ಎಳೆದು ನಕ್ಷತ್ರಗಳನ್ನು ಸೇರಿಸಿ ಮತ್ತು ಸಿರಿಯಸ್ ನಕ್ಷತ್ರವನ್ನು ಗುರುತಿಸಿ, ಹೆಸರು ಬರೆಯಿರಿ. ಇದಕ್ಕಾಗಿ ನೀವು ಚಿತ್ರ ೧೨.೩ ನ್ನು ಪರಾಮರ್ಶಿಸಬಹುದು.

೯. ನಕ್ಷತ್ರಗಳು ಮುಂಜಾನೆ ಮರೆಯಾಗುವುದನ್ನು ಮತ್ತು ಮುಸ್ಸಂಜೆಯಲ್ಲಿ ಕಾಣಿಸಿಕೊಳ್ಳುವುದನ್ನು ನೀವು ನೋಡಬಹುದು. ಹಗಲಿನಲ್ಲಿ ನಾವು ನಕ್ಷತ್ರಗಳನ್ನು ನೋಡಲು ಸಾಧ್ಯವಿಲ್ಲ. ಏಕೆ ಎಂದು ವಿವರಿಸಿ.

ಹಗಲಿನ ಸಮಯದಲ್ಲಿ ಸೂರ್ಯನ ತೀವ್ರ ಪ್ರಖರತೆಯಿಂದಾಗಿ ಇತರ ನಕ್ಷತ್ರಗಳನ್ನು ವೀಕ್ಷಿಸಲು ಸಾಧ್ಯವಾಗುವುದಿಲ್ಲ. ಜೊತೆಗೆ ಸೂರ್ಯ ಇತರ ನಕ್ಷತ್ರಗಳಿಗಿಂತ ನಮಗೆ ಹೆಚ್ಚು ಹತ್ತಿರವಾಗಿರುವುದರಿಂದ ಅದು ನಕ್ಷತ್ರಗಳಿಗಿಂತ ದೊಡ್ಡದಾಗಿ ಕಾಣುತ್ತದೆ.  ಹೆಚ್ಚು ಹತ್ತಿರವಿರುವ ಈ ಸೂರ್ಯ ಎಂಬ ನಕ್ಷತ್ರವು ಬೇರೆ ಕೆಲವು ನಕ್ಷತ್ರಗಳಿಗಿಂತ ಚಿಕ್ಕದಾಗಿದ್ದರೂ, ಅದು ನಮಗೆ ಹತ್ತಿರವಿರುವುದರಿಂದ ಅದರ ಉಜ್ವಲ ಬೆಳಕಿನಿಂದಾಗಿ ಬೇರೆ ನಕ್ಷತ್ರಗಳು ನಮಗೆ ಕಾಣುವುದಿಲ್ಲ. ಮುಸ್ಸಂಜೆಯಲ್ಲಿ, ಸೂರ್ಯ ಮುಳುಗಿ ಆಕಾಶವು ಕತ್ತಲೆಯಾದಾಗ, ನಕ್ಷತ್ರಗಳು ಮತ್ತೆ ಗೋಚರಿಸುತ್ತವೆ.

೧೦. ನಿರ್ಮಲ ರಾತ್ರಿಯಾಕಾಶದಲ್ಲಿ ೨-೩ ಗಂಟೆಗಳ ಅವಧಿಯಲ್ಲಿ ೩-೪ ಬಾರಿ ಬಿಗ್ ಡಿಪ್ಪರ್‌ನ್ನು ವೀಕ್ಷಿಸಲು ಪ್ರಯತ್ನಿಸಿ. ಪ್ರತೀ ಬಾರಿಯೂ ಧ್ರುವನಕ್ಷತ್ರವನ್ನು ಗುರುತಿಸಿ. ಬಿಗ್ ಡಿಪ್ಪರ್ ಚಲಿಸಿದ ಹಾಗೆ ಕಾಣುತ್ತಿದೆಯೇ? ಪ್ರತೀ ಬಾರಿಯೂ ಸಮಯವನ್ನು ನಮೂದಿಸಿ, ಇದನ್ನು ವಿವರಿಸುವ ರೇಖಾಚಿತ್ರವನ್ನು ಬರೆಯಿರಿ.

ಭೂಮಿಯ ತಿರುಗುವಿಕೆಯಿಂದಾಗಿ ಬಿಗ್ ಡಿಪ್ಪರ್ ಧ್ರುವ ನಕ್ಷತ್ರದ ಸುತ್ತಲೂ ಚಲಿಸುವಂತೆ ಕಾಣುತ್ತದೆ. ರೇಖಾಚಿತ್ರವು ಬಿಗ್ ಡಿಪ್ಪರ್ ಅನ್ನು ಆಕಾಶದಲ್ಲಿ ವಿಭಿನ್ನ ಸ್ಥಾನಗಳಲ್ಲಿ ತೋರಿಸುತ್ತದೆ, ಇದು ಧ್ರುವ ನಕ್ಷತ್ರದ ಸುತ್ತ ಅದರ ಸ್ಪಷ್ಟ ಚಲನೆಯನ್ನು ಸೂಚಿಸುತ್ತದೆ.

೧೧. ರಾತ್ರಿಯಾಕಾಶವನ್ನು ಕಲ್ಪಿಸಿಕೊಂಡು ಒಂದು ಕವನ ಅಥವಾ ಕಥೆ ಬರೆಯಿರಿ.

ಹೊಲದಲಿ ರೈತನು ಬೆಳೆಯನು
ಕಾಯುತ ಮಲಗಿಹನು
ಮಲಗುತ ಆಕಾಶವ ನೋಡುತ
ನಕ್ಷತ್ರಗಳನ್ನು ಎಣಿಸಿಹನು

ಚುಕ್ಕಿಗಳ ಅಂದದ ಆಕಾಶವ

ಕಣ್ಣಲಿ ತುಂಬಿಹನು
ಚುಕ್ಕಿ ಗಳ ನಡುವೆ ಇರುವ ಚಂದ್ರ
ಬೆಳದಿಂಗಳನು ಚೆಲ್ಲಿಹನು

ಮಿನುಗುವ ಚುಕ್ಕಿ ಓಡುವ ಚುಕ್ಕಿ
ಗುಂಪಿನಚುಕ್ಕಿ ಸಣ್ಣ ಚುಕ್ಕಿ ದೊಡ್ಡ ಚುಕ್ಕಿ
ರಾತ್ರಿಯ ಆಕಾಶವ ಬೆಳಗಿಹರು
ಜಗತ್ತೇ ವಿಸ್ಮಯ ಆಕಾಶವು ವಿಸ್ಮಯ